**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಸ್ಪೇಷಲ್ ಕೇಸ್ ನಂ. 95/2021**

ಫ್ರಾ.ಸಾ. 1

ಚಾ.ಸಾ. 1

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 21.10.2024**

| | |
|---|---|
| ಸಾಕ್ಷಿದಾರರ ಹೆಸರು | ಧನಂಜಯ |
| ತಂದೆಯ ಹೆಸರು | ಲೇಟ್ ಜವರಯ್ಯ |
| ವಯಸ್ಸು | 47 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ಹಾದನೂರು ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ನಾವು ಪರಿಶಿಷ್ಟ ಜಾತಿ ಆದಿ ಕರ್ನಾಟಕಕ್ಕೆ ಸೇರಿದವನಾಗಿರುತ್ತೇನೆ. ಹಾದನೂರು ಗ್ರಾಮದ ಚಾಸಾ.2 ರಿಂದ 9 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು, ಅವರು ನಮ್ಮ ಊರಿನವರು, ಅವರು ಒಕ್ಕಲಿಗರು. ನಾವು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಆರೋಪಿತರಿಗೆ ಮೊದಲಿನಿಂದಲೂ ಗೊತ್ತು. ಹಾದನೂರು ಗ್ರಾಮ ತೆಂಡೇಕೆರೆ ಗ್ರಾಮ ಪಂಚಾಯಿತಿಗೆ ಸೇರುತ್ತದೆ.

2. 2021 ರಲ್ಲಿ ಸದರಿ ಗ್ರಾಮ ಪಂಚಾಯಿತಿಯಲ್ಲಿ ನಾನು ಸ್ಪರ್ಧಿಸಿ ಸೋತಿದ್ದೆನು. ಚುನಾವಣೆಯಲ್ಲಿ 1 ನೇ ಆರೋಪಿಯ ಹೆಂಡತಿ 2 ನೇ ಆರೋಪಿ ಗೆದ್ದಿದ್ದರು. ದಿನಾಂಕ 20.02.2021 ರಂದು ರಾತ್ರಿ ಸುಮಾರು 8.00 ಗಂಟೆ ಸಮಯದಲ್ಲಿ ನಾನು ನಮ್ಮ ಊರಿನ ಚಾಸಾ.6 ರವರ ಅಂಗಡಿ ಹತ್ತಿರ ಅವರನ್ನು ನೋಡಲು ಹೋದಾಗ ಅವರು ಇರಲಿಲ್ಲ ಅವರ ಮಗ ಚಾಸಾ.4 ಇದ್ದನು. ಅಂಗಡಿ ಮುಂದೆ ನಮ್ಮ ಊರಿನ ಚಾಸಾ.3 ಇದ್ದರು. ಅಂಗಡಿಯ ಮುಂದೆ ಚಾಸಾ.6 ರವರಿಗೆ ಕಾಯುತ್ತಾ ಕುಳಿತಿದ್ದಾಗ

ನ್ಯಾಯಾಲಯದ ಮುಂದಿರುವ ಆರೋಪಿತರು ಅಂಗಡಿ ಮುಂದೆ ಬಂದು ಎಲ್ಲರೂ ಬೋಳಿ ಮಗನೇ, ಸೂಳೇ ಮಗನೇ, ಹೊಲೆಯ ನನ್ನ ಮಗನೇ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಮಗೆ ಸಪೋರ್ಟ್ ಮಾಡದೇ ಬೇರೆಯವರಿಗೆ ಸಪೋರ್ಟು ಮಾಡಿದ್ದೀಯಾ ಎಂದು ಎಂದು ಅವ್ಯಾಚ ಶಬ್ಧದಿಂದ ಜಾತಿ ನಿಂದನೆ ಮಾಡಿ ಬೈದರು. ಎಲ್ಲರೂ ನನ್ನನ್ನು ಕೆಳಕ್ಕೆ ಕೆಡವಿಕೊಂಡು, ಕಾಲಿನಿಂದ ತುಳಿದು, 1 ನೇ ಆರೋಪಿ ಅಲ್ಲೇ ಬಿದ್ದಿದ್ದ ಕಲ್ಲಿನಿಂದ ನನ್ನ ಬಲಭಾಗದ ಹೊಟ್ಟೆಗೆ ಹೊಡೆದನು. ಆ ಸಮಯದಲ್ಲಿ ನಾನು ಧರಿಸದ್ದಂತಹ ಶರ್ಟ್ ಹಾಗೂ ಬನಿಯನ್ ಹರಿದು ಹಾಕಿದರು. 2 ನೇ ಆರೋಪಿ ಹವಾಯ್ ಚಪ್ಪಲಿಯಿಂದ ನನಗೆ ಹೊಡೆದಳು.

3. ಚಾಸಾ.3 ಹಾಗೂ 4 ರವರು ಜಗಳ ಬಿಡಿಸಿ ನನ್ನನ್ನು ಬೈಕಿನಲ್ಲಿ ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗುವಾಗ ಆರೋಪಿಗಳು ಈ ದಿವಸ ನೀನು ಬದುಕಿಕೊಂಡಿದ್ದೀಯಾ ನಮ್ಮ ಕಣ್ಣಿಗೆ ಪುನಃ ಬಿದ್ದರೆ ನಿನ್ನನ್ನು ಸಾಯಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿದರು. ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋದರು.

4. ಚಿಕಿತ್ಸೆ ಪಡೆದು ದಿನಾಂಕ 24.02.2021 ರಂದು ಪೊಲೀಸರಿಗೆ ದೂರು ನೀಡಿರುತ್ತೇನೆ. ಈಗ ನಾನು ಸಲ್ಲಿಸಿರುವ ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಗಿದೆ.

5. ದೂರು ಕೊಟ್ಟ ನಂತರ ಪೊಲೀಸರು ಪಂಚರಾದ ಚಾಸಾ.6 ಹಾಗೂ 7 ಇವರೊಂದಿಗೆ ಘಟನಾ ಸ್ಥಳವಾದ ಹಾದನೂರು ಗ್ರಾಮದ ಚಾಸಾ.6 ರವರ ಅಂಗಡಿ ಮುಂದೆ ಘಟನಾ ಸ್ಥಳವನ್ನು ನಾನು ತೋರಿಸಿದಾಗ ಪೊಲೀಸರು ಬೆಳಗ್ಗೆ 11.00 ರಿಂದ 12.00 ಗಂಟೆವರೆಗೆ ಸ್ಥಳ ಮಹಜರ್ ಮಾಡಿ ಕೃತ್ಯದ ಸಮಯದಲ್ಲಿ ನಾನು ಧರಿಸಿದ್ದಂತಹ ಹರಿದ ಶರ್ಟ್ ಹಾಗೂ ಬನಿಯನ್ ಹಾಜರುಪಡಿಸಿದಾಗ ಪೊಲೀಸರು ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡು ವಿವರವಾದ ಮಹಜರ್ ಮಾಡಿ ಸ್ಥಳದಲ್ಲಿ ಪೊಟೋಗಳನ್ನು ತೆಗೆದರು. ಸ್ಥಳ ಮಹಜರ್ ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಗಿಹಿದೇ. ಒಟ್ಟು 6 ಪೊಟೋಗಳನ್ನು ಒಟ್ಟಾರೆ ನಿಪಿ.3 ಎಂದು ಗುರುತಿಸಲಾಗಿದೆ. ಮಹಜರ್ ಕಾಲದಲ್ಲಿ ಜಪ್ತಾದ ಶರ್ಟ್ ಹಾಗೂ ಬನಿಯನ್ ಸೀಲಾದ ಬಟ್ಟೆ ಚೀಲ ತೆಗೆದು ಅದರಲ್ಲಿರುವ ಮು.ಮಾ. ವನ್ನು ಸಾಕ್ಷಿ ನೋಡಿ ಗುರತಿಸಿದ್ದು ಮು.ಮಾ.1 ಹಾಗೂ ಮು.ಮಾ.2 ಎಂದು, ಹಲ್ಲೆಗೆ ಉಪಯೋಗಿಸಿದಂತಹ ಕಲ್ಲು ನೋಡುತ್ತಿದ್ದು ಸೀಲಾದ ಬಟ್ಟೆ ಚೀಲ ತೆಗೆದು ಅದರಲ್ಲಿರುವ ಮು.ಮಾ. ವನ್ನು ಸಾಕ್ಷಿ ನೋಡಿ ಗುರತಿಸಿದ್ದು

ಅದನ್ನು ಮು.ಮಾ.3 ಎಂದು ಗುರುತಿಸಲಾಗಿದೆ. 2 ನೇ ಆರೋಪಿ ಹಲ್ಲೆ ಮಾಡಲು ಉಪಯೋಗಿಸಿದ ಹವಾಯ್ ಚಪ್ಪಲಿ ಸೀಲಾದ ಬಟ್ಟೆ ಚೀಲ ತೆಗೆದು ಅದರಲ್ಲಿರುವ ಮು.ಮಾ. ವನ್ನು ಸಾಕ್ಷಿ ನೋಡಿ ಗುರತಿಸಿದ್ದು ಅದನ್ನು ಮು.ಮಾ.4 ಎಂದು ಗುರುತಿಸಲಾಗಿದೆ.

6. ಹಲ್ಲೆ ಮಾಡಿದಂತಹ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿಗಳಾಗಿರುತ್ತಾರೆ. ಎಲ್ಲಾ ವಿಚಾರ ಕುರಿತು ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ಎಂ ವಕೀಲರಿಂದಃ**

1. ಗ್ರಾಮ ಪಂಚಾಯಿತಿ ಚುನಾವಣೆ ಯಾವ ದಿನಾಂಕ, ತಿಂಗಳು ನಡೆದಿತ್ತು ಎಂದು ಹೇಳಲು ಆಗುವುದಿಲ್ಲ. ಚುನಾವಣೆಯಲ್ಲಿ ನಾನು ಯಾವ ರಾಜಕೀಯ ಪಕ್ಷದ ಮುಖಾಂತರ ನಿಂತಿರಲಿಲ್ಲ. ನನ್ನ ವಿರುದ್ಧ ಕಾಂತರಾಜು ಎಂಬುವವರು ನಿಂತಿದ್ದರು. 2 ನೇ ಆರೋಪಿ ವಿರುದ್ಧ ಸವಿತ ಎಂಬುವವರು ನಿಂತಿದ್ದರು. ಚಾಸಾ.2 ರವರು ಸವಿತಾರವರ ಮಗ. ಚಾಸಾ.3 ನಮ್ಮ ಸಂಬಂಧಿಕರು. ಸವಿತಾ ಹಾಗೂ 2 ನೇ ಆರೋಪಿ ನಡುವೆ ಚುನಾವಣೆ ನಡೆದಿತ್ತು. 2 ನೇ ಆರೋಪಿ ಸಾಮಾನ್ಯ ವರ್ಗದವರು ಆದ್ದರಿಂದ ಗೆಲ್ಲಲು ಪರಿಶಿಷ್ಟ ವರ್ಗದವನಾದ ನನ್ನ ಮತ ಬೇಕಾಗಿರಲಿಲ್ಲ ಎಂದರೆ ಸರಿಯಲ್ಲ.

2. ಚುನಾವಣೆ ನಡೆದ ಎರಡು ತಿಂಗಳಲ್ಲಿ ಘಟನೆ ಸಂಭವಿಸಿತ್ತು. ಫೆಬ್ರವರಿ ತಿಂಗಳು ಇದ್ದರಿಂದ ಚಳಿ ಹಾಗೂ ಕತ್ತಲು ಇತ್ತು ಎಂದರೆ ಸರಿ. ಹೀಗಾಗಿ ಸಾಮಾನ್ಯವಾಗಿ ರಾತ್ರಿ 7.00 ಗಂಟೆ ಸಮಯಕ್ಕೆ ಗ್ರಾಮಸ್ಥರು ಮಲಗುತ್ತಾರೆಂದರೆ ಸರಿಯಲ್ಲ. ನಮ್ಮ ಗ್ರಾಮದಿಂದ ಚಾಸಾ.6 ರವರ ಅಂಗಡಿಗೆ ಸುಮಾರು ಎಷ್ಟು ದೂರ ಇದೆ ಎಂದರೆ ಪಕ್ಕದಲ್ಲೇ ಇದೆ. ಚಾಸಾ.3 ಹಾಗೂ 4 ರವರು ಯಾವ ಸಮಯಕ್ಕೆ ಬಂದರು ಎಂದರೆ ಗೊತ್ತಿಲ್ಲ, ಮುಂದುವರೆದು ಘಟನೆ ನಡೆಯುವಾಗ ಇದ್ದರು. ಚುನಾವಣೆ ಪೂರ್ವದಲ್ಲಿ ನಮ್ಮ ಹಾಗೂ 2 ನೇ ಆರೋಪಿ ಕುಟುಂಬದವರು ಅನ್ಯೋನ್ಯವಾಗಿದ್ದೆವು, ಏಕೆಂದರೆ ಅವರು ನಮ್ಮ ಊರಿನವರು. ಕಲ್ಲಿಗೆ ಹಾಗೂ ನನ್ನ ಬಟ್ಟೆಗೆ ರಕ್ತದ ಕಲೆ ಆಗಿರಲಿಲ್ಲ.

3. ಆಸ್ಪತ್ರೆಯಲ್ಲಿ ನನ್ನ ಎಕ್ಸ್ ರೇ ಹಾಗೂ ಸ್ಕ್ಯಾನಿಂಗ್ ಮಾಡಿದ್ದರು. ನಿಪಿ.1 ಅನ್ನು 4 ದಿನಗಳು ಕಳೆದ ಮೇಲೆ ಟೈಪ್ ಮಾಡಿಸಿ ಠಾಣೆಗೆ ಕೊಟ್ಟಿದ್ದೆ. ಮೈಸೂರಿನ ಕೆ.ಆರ್.

ಆಸ್ಪತ್ರೆಯಲ್ಲಿ 4 ದಿವಸ ಒಳರೋಗಿಯಾಗಿದ್ದೆ. ದಿನಾಂಕ 20.02.2021 ರಿಂದ 24.02.2021 ರವರೆಗೆ ಒಳರೋಗಿಯಾಗಿದ್ದೆ. ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಬಂದು ನನ್ನ ಹೇಳಿಕೆ ಮಾಡಿಕೊಂಡಿದ್ದರು.

4. ಚಾಸಾ.6 ರವರ ಅಂಗಡಿ ತೆರೆದಿತ್ತು, ಈ ವಿಷಯ ದೂರಿನಲ್ಲಾಗಲೀ, ನನ್ನ ಹೇಳಿಕೆಯಲ್ಲಾಗಲೀ ಪೊಲೀಸರ ಮುಂದೆ ಹೇಳಿದ್ದೇನೋ ಇಲ್ಲವೋ ಜ್ಞಾಪಕವಿಲ್ಲ. ಅಂಗಡಿಯಿಂದ ಘಟನೆ ಸ್ಥಳಕ್ಕೆ 50 ಮೀಟರ್ ದೂರು ಆಗುತ್ತದೆ. ರಸ್ತೆ ಬದಿಯಲ್ಲಿ ಜನರು ಯಾರೂ ಇರಲಿಲ್ಲ.

5. ಆರೋಪಿತರು ಹಲ್ಲೆ ಮಾಡಿ, ಜಾತಿ ನಿಂದನೆ ಮಾಡಿ, ಅವ್ಯಾಚ ಶಬ್ಧದಿಂದ ಬೈದು, ಜೀವದ ಧಮ್ಕಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಚಪ್ಪಲಿಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ.3 ರಂತಹ ಕಲ್ಲು ಊರಿನಲ್ಲಿ ಸಾಕಷ್ಟು ಸಿಗುತ್ತವೆಂದರೆ ಸರಿ. ಅದರ ಬಗ್ಗೆ ವಿಶೇಷ ಗುರುತು ಇದೆಯೇ ಎಂದರೆ ಅದನ್ನು ನನ್ನ ಹೆಂಡತಿ ಎತ್ತಿ ಇಟ್ಟಿದ್ದಳು. ಮು.ಮಾ.4 ರಂತಹ ಚಪ್ಪಲಿ ಊರಿನಲ್ಲಿ ಸಾಕಷ್ಟು ಜನ ಉಪಯೋಗಿಸುತ್ತಾರೆಂದರೆ ಸರಿ. 2 ನೇ ಆರೋಪಿ 37 ಮತದಿಂದ ಗೆದ್ದಿದ್ದರು ಎಂದರೆ ಸರಿ. ಹೀಗಾಗಿ ನನ್ನ ಸಹಾಯ ಅವರಿಗೆ ಬೇಕಾಗಿರಲಿಲ್ಲ ನನ್ನ ಮೇಲೆ ದ್ವೇಷ ಕಾರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರೇ ನನ್ನ ಸೋಲಿಗೆ ಕಾರಣ ಎಂದು ರಾಜಕೀಯ ದ್ವೇಷದಿಂದ ಯಾವುದೇ ಘಟನೆ ನಡೆಯದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆಂದರೆ ಸರಿಯಲ್ಲ. 25 ನೇ ತಾರೀಖು ಘಟನಾ ಸ್ಥಳದಲ್ಲಿ ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿದ್ದರು.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.